**‘ನನ್ನ ಓದು’ ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

# ನಮ್ಮೊಡನಿದ್ದೂ ನಮ್ಮಂತಾಗದವರ ಅರಿವಿನ ಕಥನಗಳು

**ಎಂ.ಎಸ್. ಆಶಾದೇವಿ**

ಅಮೃತಸ್ಯ ಪುತ್ರ ಎನ್ನುವುದು, ಒಟ್ಟೂ ಮನುಷ್ಯಜನ್ಮವನ್ನು ಸಂಭ್ರಮಿಸುವ, ಗೌರವಿಸುವ ಒಂದು ದೃಷ್ಟಿಕೋನ. ಪುತ್ರ ಎಂದಿದ್ದರೂ ಅದು ಗಂಡು ಮತ್ತು ಹೆಣ್ಣು ಇಬ್ಬರನ್ನೂ ಒಳಗೊಂಡಿದೆ ಎನ್ನುವುದು ಗ್ರಹೀತ. ‘ಕೊಟ್ಟ ಕುದುರೆ’ಯಾಗಿ ಬದುಕನ್ನು ಸ್ವೀಕರಿಸುವ ಧೀರ, ಜೀವಪರ ನಿಲುವು ಇದು. ಬದುಕು ಮತ್ತು ಮನುಷ್ಯ ಇಬ್ಬರನ್ನೂ ಕರಾರುಗಳೇ ಇಲ್ಲದೆ ಗೌರವಿಸಬೇಕಾದ ಮೂಲತತ್ತ್ವವಾಗಿಯೂ ಇದು ಕಾಣಿಸುತ್ತದೆ. ಆದರೆ, ವಾಸ್ತವಾಗಿ ಕಾಣಿಸುತ್ತಲೇ ಅದರ ಅವಾಸ್ತವತೆಯನ್ನೂ ಇದು ಧ್ವನಿಸುತ್ತದೆ. ರಮ್ಯವಾಗಿ, ಆದಿಮ ಪ್ರಾಕೃತಿಕ ನೆಲೆಯದ್ದು ಎಂದು ಅನ್ನಿಸುತ್ತಿರುವಾಗಲೇ ಮನುಷ್ಯರನ್ನು ಮನುಷ್ಯರೆಂದೇ ನೋಡಲಾಗದ ಅಮಾನವೀಯ ಸಮುದಾಯದ ಕ್ರೌರ್ಯವು ರಾಚುತ್ತದೆ. ದಲಿತರನ್ನು, ಹೆಣ್ಣನ್ನು ಅಮೃತಸ್ಯ ಪುತ್ರರೆಂದು ಒಪ್ಪಲು ತಿಣುಕಾಡುವ ಸಮುದಾಯವು ತೃತೀಯ ಲಿಂಗಿಗಳನ್ನು, ಲೈಂಗಿಕ ಅಲ್ಪಸಂಖ್ಯಾತರನ್ನು ಹೇಗೆ ಕಾಣುತ್ತಿದೆ, ಕಾಣಬಲ್ಲದು ಎನ್ನುವುದು ಸರಳವಾದ ಪ್ರಶ್ನೆಯೂ ಆಗಿದೆ, ಅತ್ಯಂತ ನೋವಿನ ಉತ್ತರವೂ ಆಗಿದೆ. (ಹೆಣ್ಣನ್ನೇ ಅಪೂರ್ಣವೆಂದು, ಅವರನ್ನು ಮನುಷ್ಯರೆಂದು ಒಪ್ಪುವುದು ಕಷ್ಟ ಎನ್ನುವುದನ್ನು ಪ್ರಶ್ನಾತೀತ ಎನ್ನುವ ಮನಃಸ್ಥಿತಿಯಲ್ಲಿ ಒಪ್ಪಿದ ನಾಗರಿಕತೆಯಲ್ಲವೆ ಇದು?)

ಲೈಂಗಿಕ ಅಲ್ಪಸಂಖ್ಯಾತರನ್ನು ಕುರಿತ ಚರ್ಚೆಯಲ್ಲಿ ನಿಜವೆಂದರೆ, ಇದು ಎರಡನೆಯ ಪ್ರಶ್ನೆ. ಮೊದಲನೆಯ ಪ್ರಶ್ನೆಯೆಂದರೆ, ಸ್ವತಃ ಲೈಂಗಿಕ ಅಲ್ಪಸಂಖ್ಯಾತರು, ತಮ್ಮನ್ನು ತಾವು, ಇಂಥ ಭಿತ್ತಿಯಲ್ಲಿ ಹೇಗೆ ಸ್ಥಾಪಿಸಿಕೊಳ್ಳುತ್ತಾರೆ, ಆ ಪಯಣ ಹೇಗಿರುತ್ತದೆ ಎನ್ನುವುದು. ಅದು ಕಲ್ಲುಮುಳ್ಳಿನ ಹಾದಿ ಎನ್ನುವುದೇನೋ ನಿಜ. ಆದರೆ, ಇತರ ಕಷ್ಟದ ಹಾದಿಗಳಿಗೂ ಇದಕ್ಕೂ ಭೂಮಿ ಆಕಾಶಗಳ ಅಂತರವಿದೆ. ತಮ್ಮನ್ನು ತಾವು ಲೋಕಕ್ಕಿಂತ ಭಿನ್ನವಾದ, ಲೋಕವು ಒಪ್ಪಲು ತಯಾರೇ ಇಲ್ಲದ ಆಯಾಮದಲ್ಲಿ